ಕವಿತೆ

ದಾದಾಪೀರ್ ಜೈಮನ್
ಕಲೆ: ಬಸವರಾಜ ಕಲೆಗಾರ



ಪಾವಡರಾಯ

ಗೋರಂಟಿ ಹಚ್ಚಿದ ಐದು ಬೆರಳಿನ
ನನ್ನೆರಡು ಕೈಗಳ ನೋಡಿದಾಗಲೆಲ್ಲ
ನೆನಪಾಗುತ್ತಾರೆ
ಐದು ತಲೆಗಳ ಸೃಷ್ಟಿ ಲಯಗಳ ಹರಿಕಾರರು
ಪಾಪ ಕಳೆದ ತಾಯಿ ಅಂಗಾಳಮ್ಮ
ಪೂಜೆಗೈದ ತಾಯಿಯಂತಹ ತಂದೆ ಪಾವಡರಾಯ
ಕಾಲ ಕಾಲಗಳೊಳಗೆ ಹರಿದು ಬಂದ ಅವನ ಒಕ್ಕಲು ಮಕ್ಕಳು
ಮತ್ತು ಕನಸು
ನಾಳೆ ಹಚ್ಚ ಗೋರಂಟಿ ಕೈತೊಳೆದು ಕೆಂಪು ಚಿತ್ತಾರದ ಈ ಬೆರಳ ತುದಿಗಳಿಂದ
ಅಮ್ಮನಿಗೆ ಅಂಗಾಳಮ್ಮನಿಗೆ ಬೊಗಸೆ ಕನಕಾಂಬರಿಯ ಮುಡಿಸುವ ಕಂಪನ

ಜಗವ ಸೃಜಿಸಿದ ಸೃಷ್ಟಿಯ ತಂದೆ
ಮುಳುಗಿರಲು ಅಹಮ್ಮಿನ ಮದದೊಳಗೆ
ಶ್ರೇಷ್ಠತೆಯ ಐದನೇ ತಲೆಯೊಂದು ನೆತ್ತಿಯ ಮೇಲೆ ತುಸು ಹೆಚ್ಚೇ ಪುಟಿದೇಳುತಿರಲು
ಪಂಚಶಿರ ಪರಶಿವನ ಮನವೊಲಿಕೆಯೂ ಸೋತು ಕೂತಿರಲು
ಬೇಡದ ಅಹಮ್ಮನು ಬಿಡದೆ ಬ್ರಹ್ಮ ಥಕಥೈ ಕುಣಿಯುತಿರಲು
ಸಂಸಾರ ಸಾಗರವು ಗಾಳಿಗೆ ನಡುಗುವ ಹಡಗಿನಂತಾಗಿರಲು
ಧಿಮಿ ಧಿಮಿಗುಡುತ ಧಿಗಿ ಧಿಗಿ ತುಡಿತ ತಾಂಡವವಾಡುತ
ಶ್ರೇಷ್ಠತೆಯಹಮ್ಮಿನ ತಲೆಯೊಂದ ಕಿತ್ತೇಬಿಟ್ಟ ಲಯಕಾರ
ಹತ್ತೇಬಿಟ್ಟಿತು ಪರಶಿವನಿಗೆ
ತಂದೆಯ ತಲೆಯನೇ ಕೊಂದ ಬ್ರಹ್ಮ ಹತ್ಯಾದೋಷ
ಕೈಗಳಿಗಂಟಿದ ರುಂಡಕಪಾಲ ಬೇರೆಯಾಗಲೊಲ್ಲದು
ಇಲ್ಲ ಮಗನೆ ನಿನಗೆ ಮುಕುತಿ
ಅಲೆಯಬೇಕು ನೀನು ಅಲೆಅಲೆಯಾಗಿ ಭೂಲೋಕದ ಸಂಸಾರ ಸಾಗರದಲ್ಲಿ
ಶಾಪವೆಂಬುದು ಜನ್ಮಕೊಟ್ಟಿತು ಭೈರವನಿಗೆ ಕಪಾಲಭೈರವನಿಗೆ!
ಭೈರವನೀಗ ಅಲೆಯಬೇಕು ತಂದೆಯ ಕೊಂದ ಪಾಪ ತೊಳೆಯಬೇಕು
ಅಹಮ್ಮಿನ ತಲೆಯನಷ್ಟೇ ಕೊಂದ ಸತ್ಯದ ಸೊಲ್ಲ ಅರುಹಬೇಕು